# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 15/07/2017 ರಂದು ಬೆಳಿಗ್ಗೆ 10.30 ಘಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಮಾನ್ಯ ಕುಲಪತಿಗಳ ಕಛೇರಿಯ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಶ್ರೀ ಡಿ.ಶಿವಲಿಂಗಯ್ಯರವರ ಅಧ್ಯಕ್ಷತೆಯಲ್ಲಿ ನಡೆದ 41ನೇ ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ಡಿ. ಶಿವಲಿಂಗಯ್ಯ**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಡಾ॥ ಕೆ.ಜಿ ಚಂದ್ರಶೇಖರ**<br>ಕುಲಸಚಿವರು ಮತ್ತು<br>ಶೈಕ್ಷಣಿಕ ಮಂಡಳಿ ಸದಸ್ಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. |
| **ಪ್ರೊ. ಮಹಾದೇವಿ**<br>ಡೀನ್ (ಶೈಕ್ಷಣಿಕ) ಹಾಗೂ<br>ಶೈಕ್ಷಣಿಕ ಮಂಡಳಿಯ ಸದಸ್ಯರು, ಕರಾಮುವಿ,<br>ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು,<br>ಕರಾಮುವಿ, ಮೈಸೂರು |
| **ಪ್ರೊ. ಎ. ರಂಗಸ್ವಾಮಿ**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು | **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗೂ<br>ಶೈಕ್ಷಣಿಕ ಮಂಡಳಿಯ ಸದಸ್ಯರು, ಕರಾಮುವಿ,<br>ಮೈಸೂರು. |
| **ಪ್ರೊ. ಜಗದೀಶ,**<br>**ನಿರ್ದೇಶಕರು,**<br>ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ<br>ಕರಾಮುವಿ, ಮೈಸೂರು. | |

ಸಭೆಗೆ ಹಾಜರಾದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ 41ನೇ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

ವಿಷಯ ಸಂಖ್ಯೆ: 41.01

## ಯು.ಜಿ.ಸಿ. ಕಾಯ್ದೆಯ (Open and Distance Learning - 2017) ಮಾರ್ಗಸೂಚಿಗಳನ್ನು ವಿಶ್ವವಿದ್ಯಾನಿಲಯದಲ್ಲಿ ಅನುಷ್ಠಾನಗೊಳಸುವ ಬಗ್ಗೆ.

Implementation of UGC Regulation (Open & Distance Learning – 2017

The University Grants Commission in exercise of its power conferred under sub-section (1) of Section 26 read with Clause (j) of Section 12 has published a Regulation governing Open and Distance Learning-2017 through an extraordinary – Part III dated 23.06.2017 bearing No. F.No.2-4/2015 (DEB-III)**(copy enclosed)**. The salient features of the Regulations are as under:

1. The School concept has been introduced by UGC headed by a Professor.
2. Minimum staffing pattern of one Associate Professor and two Assistant Professors for each discipline/programme.
3. Centre for Internal Quality Assurance is required to be established.
4. The manner of recognition and its withdrawal and other procedures for approval of Open Distance Learning has been prescribed in the Regulation.
5. Every Higher Educational institution shall submit a proposal (PPR) as prescribed under the said Regulation.
6. Learner Support Service Centre/Study Centre shall be established with adequate academic and physical infrastructure.
7. Higher Educational institution shall take necessary measures for an effective implementation of Information Technology development.
8. Higher Educational institution offering Open Distance Learning shall comply with UGC mandatory assessment and accreditation of Higher Educational institution Regulations-2012 and it shall be mandatory for Open Universities to get National Assessment and Accreditation within a period of one year after they become eligible.
9. All other terms and conditions laid down in the said Regulation are mandatory.

It is appropriate to state here that University has made all its efforts for getting recognition from UGC for the academic year 2013-14 & 2014-15. The proposal submitted to the UGC is culminated in an interface meeting held on 06.02.2017. An another meeting was also held in the Chamber's of Secretary, MHRD, Government of India with Smt.

RathnaPrabha, Additional Chief Secretary, Prof.D.Shivalingaiah, the Vice-Chancellor of the University, Dr.K.G.Chandrashekar, Registrar of the University and Dr.Jaspal Singh Sandhu, Secretary, UGC.It was suggested during the meeting that a separate proposal in respect of in-house programme and academic collaborative programme be sent to UGC for taking further action in the matter. As regards to the academic year 2017-18 the University may apply a fresh in compliance with the UGC Regulation 2017. The proposals in respect of in-house programme and academic collaborative institution have already been submitted. The University is awaiting for uploading of format by UGC to submit its on-line proposal.

The University is initiating action to fulfil the requirement of the UGC Regulation (Open & Distance Learning)-2017.

In this connection, the following is placed before the Board of Management for its consideration and approval viz., for implementation of UGC Regulation (Open & Distance Learning)-2017 and also for the Draft Statute relating to the establishment of Schools.

ಸದರಿ ವಿಷಯವನ್ನು ಸಭೆಯಲ್ಲಿ ಗಮನಿಸಲಾಯಿತು. **Implementation of UGC Regulation (Open & Distance Learning – 2017** ಅನ್ನು ಅಳವಡಿಸಕೊಳ್ಳುವ ಸಂಬಂಧ ಮಂಡಿಸಿರುವ ವಿಷಯವನ್ನು ಗಮನಿಸಿ ಅನುಮೋದನೆ ನೀಡಲು ಕೋರಲಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಈ ಕುರಿತು ಮಾತನಾಡುತ್ತಾ, 2017 ರ ಯು.ಜಿ.ಸಿ. ಮಾರ್ಗಸೂಚಿಗಳನುಸಾರ ಪ್ರತಿಯೊಂದು ವಿಭಾಗದಲ್ಲೂ ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್ ಹಾಗೂ ಅಸಿಸ್ಟಿಂಟ್ ಪ್ರೊಫೆಸರ್‌ಗಳು ಇರಬೇಕೆಂದು ತಿಳಿಸಿರುತ್ತದೆ. ಸದರಿ ಮಾರ್ಗಸೂಚಿಗಳನ್ವಯ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಸ್ಕೂಲ್‌ಗಳ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಕರಡು ನಿಯಮಾವಳಿಗಳನ್ನು ರಚಿಸಿದ್ದು, ಕರಡನ್ನು ಅವಗಾಹಿಸಿ ಅನುಮೋದನೆ ನೀಡುವಂತೆ ಕೋರಿದರು. ಸದರಿ ವಿಷಯವನ್ನು ವಿವರವಾಗಿ ಚರ್ಚಿಸಿದ ಸಭೆಯು ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಂಡಿತು.

ತೀರ್ಮಾನ:

1. The Department of Ancient History & Archaeology and Tourism be merged with the Department of History and be re-named as the Department of History and Archaeology.
2. The Anthropology is being offered only at under graduate level, be merged with the Department of Sociology and be re-named as the Department of Sociology.
3. The Department of Information Technology be merged with Department of Computer Science and be re-named as the Department of Computer Science and Information Technology.

* * * * *

**ವಿಷಯ ಸಂಖ್ಯೆ: 41.02**

**ವಿಶ್ವವಿದ್ಯಾನಿಲಯದ ವಿವಿಧ ಪದವಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರ (ಪಿ.ಪಿ.ಸಿ) ವಿತರಿಸಲು ಅನುಮೋದನೆ ಕೋರುವ ಬಗ್ಗೆ.**

**ವಿಷಯ:** ವಿಶ್ವವಿದ್ಯಾನಿಲಯದ ವಿವಿಧ ಪದವಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರ (ಪಿ.ಪಿ.ಸಿ) ವಿತರಿಸಲು ಅನುಮೋದನೆ ಕೋರುವ ಬಗ್ಗೆ.

**ಉಲ್ಲೇಖ:**01.ಘನತ್ತೆವೆತ್ತ ರಾಜ್ಯಪಾಲರ ಕಾರ್ಯಾಲಯದ ಪತ್ರ ಸಂಖ್ಯೆ ಜಿ ಎಸ್ 13 ಕೆಒಎಂ 2014 (ಪಿ), ದಿನಾಂಕ: 17.12.2016.

-----------

ವಿ.ವಿ.ನಿಲಯದಲ್ಲಿ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶಾತಿ ಹೊಂದಿ, ತದನಂತರ ತೇರ್ಗಡೆ ಹೊಂದುವ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ನೀಡುವ ಮುನ್ನ ವಿದ್ಯಾರ್ಥಿಗಳ ಕೋರಿಕೆಯ ಮೇರೆಗೆ ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರವನ್ನು (ಪಿ.ಪಿ.ಸಿ) ನೀಡಲಾಗುತ್ತಿದ್ದು, 2013-14ನೇ ಸಾಲಿನಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ಈಗಾಗಲೇ ದಿನಾಂಕ: 05.03.2015ರಂದು 15ನೇ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರವನ್ನು ವಿತರಿಸಲಾಗಿದೆ. ಪ್ರಸ್ತುತ, ಉಲ್ಲೇಖಿತ ಘನತ್ತೆವೆತ್ತ ರಾಜ್ಯಪಾಲರ ಕಾರ್ಯಾಲಯದ ಪತ್ರದ ನಿರ್ದೇಶನದನ್ವಯ ಹಾಗೂ ಮಾನ್ಯ ಕುಲಪತಿಯವರ ಮೌಖಿಕ ಆದೇಶದ ಮೇರೆಗೆ ಜನವರಿ – 2017ರ ಮಾಹೆಯಿಂದ ಪರೀಕ್ಷಾ ವಿಭಾಗದಿಂದ ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರವನ್ನು (ಪಿ.ಪಿ.ಸಿ) ವಿತರಿಸುವುದನ್ನು ಸ್ಥಗಿತಗೊಳಿಸಲಾಗಿದೆ.

ಪ್ರಸ್ತುತ, ದಿನನಿತ್ಯ ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರವನ್ನು ಪಡೆಯಲು ವಿದ್ಯಾರ್ಥಿಗಳು ಪತ್ರಗಳ ಮುಖಾಂತರ ಹಾಗೂ ಖುದ್ದಾಗಿ ಕೋರಿಕೆಯನ್ನು ಸಲ್ಲಿಸುತ್ತಿದ್ದಾರೆ. ಈ ಸಂಬಂಧ 2012-13ನೇ ಸಾಲಿನಲ್ಲಿ ಹಾಗೂ 2012-13 ನೇ ಸಾಲಿನ ಪೂರ್ವದಲ್ಲಿ ವಿವಿಧ ಪದವಿಗಳಲ್ಲಿ ಪ್ರವೇಶಾತಿ ಪಡೆದು ತೇರ್ಗಡೆ ಹೊಂದಿರುವ

ವಿದ್ಯಾರ್ಥಿಗಳಿಗೆ ಘಟಿಕೋತ್ಸವಕ್ಕೆ ಮೊದಲು ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರವನ್ನು ವಿತರಿಸಲು ಕ್ರಮ ಕೈಗೊಳ್ಳುವ ಸಂಬಂಧ ದಿನಾಂಕ:15.07.2017ರಂದು ನಡೆಯುವ ಶೈಕ್ಷಣಿಕ ಮಂಡಳಿ ಸಭೆಗೆ ವಿಷಯವನ್ನು ಮಂಡಿಸಲು ಅನುಮೋದನೆ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಶ್ವವಿದ್ಯಾನಿಲಯದ ವಿವಿಧ ಪದವಿಗಳಲ್ಲಿ 2012–13ನೇ ಸಾಲಿನಲ್ಲಿ ಮತ್ತು ಅದಕ್ಕೆ ಪೂರ್ವದಲ್ಲಿ ಪ್ರವೇಶಾತಿ ಹೊಂದಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ, ಅಂತಹ ವಿದ್ಯಾರ್ಥಿಗಳ ಹೆಸರು ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದಿತಗೊಂಡ ಪದವೀಧರರ ಪಟ್ಟಿಯಲ್ಲಿ ಸೇರಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರವನ್ನು ನೀಡಲು ಮತ್ತು ಅನುಮೋದಿತಗೊಂಡ ಪದವೀಧರರ ಪಟ್ಟಿಯಲ್ಲಿ ಸೇರದಿದ್ದ ಪಕ್ಷದಲ್ಲಿ ತಾಂತ್ರಿಕೇತರ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರ (ಪಿ.ಪಿ.ಸಿ) ವಿತರಿಸಲು ಅನುಮೋದನೆ ನೀಡಲಾಯಿತು.

* * * * * * * *

ಅಂತಿಮವಾಗಿ, 41ನೇ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಕುಲಪತಿಗಳು ಹಾಗು<br>ಅಧ್ಯಕ್ಷರು | ಕುಲಸಚಿವರು ಹಾಗು<br>ಸದಸ್ಯ ಕಾರ್ಯದರ್ಶಿಗಳು |